

ಕರ್ನಾಟಕದಲ್ಲಿ ಕಾಣಸಿಗುವ ಮರಕುಟುಕಗಳ ಪೈಕಿ ಅತಿ ವಿರಳ ಹಾಗೂ ಪ್ರಧಾನವಾದ ಮರಕುಟುಕಗಳಲ್ಲಿ 'ಕಂದು ಮರಕುಟುಕ'ವೂ ಒಂದು. ಮೈನಾ ಹಕ್ಕಿಯಷ್ಟು ದೊಡ್ಡದಿರುವ ಈ ಮರಕುಟುಕ ವರ್ಣ ವೈವಿಧ್ಯದಲ್ಲಿ ಇತರ ಮರಕುಟುಕಗಳಿಗಿಂತ ಕೆಲವೊಮ್ಮೆ ತೀರಾ ಸಪ್ಪೆ ಅನಿಸಿಬಿಡುತ್ತದೆ. ತಿಳಿಗೆಂಪು ಮಿಶ್ರಿತ ಕಂದು ಬಣ್ಣದ ಇದನ್ನು ಇತರ ಬಣ್ಣ ಬಣ್ಣದ ಮರಕುಟುಕಗಳಿಗೆ ಹೋಲಿಸಲಾಗದು. ಇದರ ರೆಕ್ಕೆ ಪುಕ್ಕಗಳೆಲ್ಲ ನಸುಗೆಂಪಿನ ಕಂದು ಬಣ್ಣ. ಕಣ್ಣಿನ ಕೆಳಗೆ ಒಂದು ಸುಂದರ ಕೆಂಪು ಬಣ್ಣದ ಅರ್ಧ ಚಂದ್ರಾಕೃತಿಯ ಪಟ್ಟೆ ಇರುತ್ತದೆ.

ಪಕ್ಷಿ ವೀಕ್ಷಣೆಗೆಂದು ಹೋದಾಗ ತೀರ ಅಪರೂಪವಾಗಿ ಕಂಡುಬರುವಂಥದು. ವೀಕ್ಷಣೆಗೆ ಒಂದು ಸುಲಭ ಉಪಾಯವೆಂದರೆ ಅದರ ಕೂಗನ್ನು ಮನದಲ್ಲಿಯೇ ಕರಗತ ಮಾಡಿಕೊಳ್ಳುವುದು. ಅದು ಎಲ್ಲೇ ಕೂಗಿದರೂ ಕಣ್ಣಿನ ದೃಷ್ಟಿ ಅನಾಯಾಸವಾಗಿ ಅದರತ್ತ ಹೊರಳುತ್ತದೆ. ಅಷ್ಟು ತೀವ್ರ ಗತಿಯ 'ಕೀಂಕ್... ಕೀಂಕ್... ಕೀಂಕ್..' ಎಂಬ ಕೂಗು ಈ ಪಕ್ಷಿಯ ಇರುವಿಕೆಯನ್ನು ಜಗಜ್ಜಾಹೀರು ಮಾಡಿಬಿಡುತ್ತದೆ.

ದಟ್ಟ ಕಾನನದಲ್ಲಿ ನಿಶ್ಶಬ್ದವಾಗಿ ಈ ಹಕ್ಕಿ ಕುಳಿತರೆ ಎಂತಹವರಿಗೂ ಗುರುತಿಸಲಾಗದು. ಯಾವಾಗಲೂ ನೆರಳಿನಿಂದ ಆವೃತವಾದ ಕಾಡಿನ , ಎಸ್ಟೇಟಿನ ಮರಗಳಲ್ಲಿ ಕುಳಿತಿರುವಾಗ, ಗಾಳಿಗೆ ಮರದ ಎಲೆಗಳು ಸರಿದು ಸೂರ್ಯನ ಬೆಳಕು ಇದರ ಮೈ ಮೇಲೆ ಬಿದ್ದಾಗ ಅದೊಂದು ಅದ್ಭುತ ನೋಟವೇ. ಅದರ ಬೆನ್ನ ಮೇಲಿನ ಸುಂದರ ಕಪ್ಪು ಪಟ್ಟಿಯ ದರ್ಶನ ಉತ್ತಮ ಬೆಳಕಿನಲ್ಲಷ್ಟೇ ಕಾಣಲು ಸಾಧ್ಯ.

ಫೆಬ್ರುವರಿ ತಿಂಗಳಿಂದ ಏಪ್ರಿಲ್ ವರೆಗೂ ಈ ಹಕ್ಕಿಯ ಸಂತಾನ ಋತು. 2 ರಿಂದ 3 ಬಿಳಿ ಬಣ್ಣದ ಮೊಟ್ಟೆಗಳನ್ನು ಇಡುತ್ತದೆ. ಇತರ ಎಲ್ಲಾ ಮರಕುಟುಕಗಳಂತೆ ಇದರ ಆಹಾರ ಕ್ರಮ ಇದ್ದರೂ, ಇದರ ಮೆನು ಪಟ್ಟಿಯಲ್ಲಿ ವಿಶೇಷ ಭಕ್ಷ್ಯಗಳಿವೆ.

ಮಲೆನಾಡಿನಲ್ಲಿ ಕಾಣಸಿಗುವ ಒಂದು ವಿಶಿಷ್ಟ ಇರುವೆಯನ್ನು ತನ್ನ ಆದ್ಯತೆಯ ಆಹಾರ ಪಟ್ಟಿಯಲ್ಲಿ ಇದು ಸೇರಿಸಿಕೊಂಡಿದೆ. ಆ ಇರುವೆಯ ಪ್ರಭೇದಕ್ಕೆ **"crematogaster"** ಎಂದು ಹೆಸರಿದೆ. ಅಂತಹ ಇರುವೆಯ ಭಕ್ಷಣೆಯೇ ಒಂದು ಅತ್ಯುತ್ತಮ ಅಧ್ಯಯನ ವಸ್ತು. ಆ ಇರುವೆಯಲ್ಲಿ ಅಂತಹ ಸ್ವಾದ ಏನಿದೆಯೆಂದು ಹುಡುಕ ಹೊರಟಾಗ ಕಂಡಿದ್ದು, ಸಿದ್ದಿ ಜನಾಂಗದ ಇರುವೆ ಮಾರಾಟ. ನಮ್ಮ ಪಶ್ಚಿಮ ಘಟ್ಟದ ಚಿಗಳಿ ಇರುವೆಯನ್ನು ಉತ್ತರ ಕನ್ನಡದ ಮಾರುಕಟ್ಟೆಯಲ್ಲಿ ಸಿದ್ದಿ ಜನಾಂಗದವರು ಮಾರುತ್ತಾರೆ. ಇದರಿಂದ ಒಂದು ಸ್ವಾದಿಷ್ಟ ಚಟ್ನಿ ತಯಾರಿಸುತ್ತಾರೆ. ಬಹುಶ: ಇದರ ರುಚಿ ನಮಗಿಂತ ಹೆಚ್ಚಾಗಿ ಈ ಮರಕುಟುಗಕ್ಕೆ ಚೆನ್ನಾಗಿ ತಿಳಿದಿದೆಯೆಂದು ತೋರುತ್ತದೆ. ಇದನ್ನು ಕಂಡುಕೊಂಡ ಕಾಡಿನ ಮನುಷ್ಯ ತನ್ನ ಆಹಾರ ಪಟ್ಟಿಯಲ್ಲಿ ಇದನ್ನು ಸೇರಿಸಿಕೊಂಡಿರಬೇಕು.



ಪಶ್ಚಿಮ ಘಟ್ಟದ ಕಾಡುಗಳಲ್ಲಿ ಕಪ್ಪು ಬಣ್ಣದ ಮರ ಇರುವೆ ಪ್ರಭೇದವೊಂದಿದೆ. ಇದು ಹೆಚ್ಚಾಗಿ ಮರದ ಮೇಲೆ ಓಡಾಡಿಕೊಂಡಿರುತ್ತದೆ. ಅಲ್ಲದೆ ಈ ಇರುವೆ ತನ್ನ ಗೂಡನ್ನು ಇತರ ಇರುವೆಗಳಂತೆ ನೆಲದೊಳಗೆ ಮಾಡದೆ, ಚಿಗಳಿ (ಕೆಂಜಿಗೆ) ಇರುವೆಯಂತೆ ಮರದ ಮೇಲೆ ಮಾಡುತ್ತದೆ. ಚಿಗಳಿ ಇರುವೆ ಎಲೆಗಳನ್ನೆಲ್ಲಾ ಒಗ್ಗೂಡಿಸಿ ಫೆವಿಕಾಲ್‌ನಂತಹ ಅಂಟು ದ್ರವವನ್ನು ಬಳಸಿ ಗೂಡು ಮಾಡುತ್ತದೆ. ಆದರೆ ಈ ಇರುವೆ ಸಗಣಿ ಬಣ್ಣದ ಕಪ್ಪನೆಯ ಗೂಡನ್ನು ರಚಿಸುತ್ತದೆ. ಗೂಡಿನ ಹೊರ ಮೈ ದಪ್ಪ ಪೇಪರ್ ರಟ್ಟಿನಂತಿದ್ದು, ಒಳಗಡೆ ಪದರ ಪದರಗಳಿಂದಾದ ಮಣ್ಣಿನ ಅನೇಕ ಸಣ್ಣ ಗೂಡಿನಿಂದ ಕೂಡಿರುತ್ತದೆ.

ಈ ಮರಕುಟುಕನ ಅಸಾಧಾರಣ ಜೀವನ ಶೈಲಿಯಲ್ಲಿ, ಪ್ರಮುಖ ಅಂಗಗಳೆಂದರೆ ಅದರ ಕೊಕ್ಕು, ನಾಲಗೆ, ಮೆದುಳು ಮತ್ತು ಕುತ್ತಿಗೆಯ ಮಾಂಸ ಖಂಡಗಳು. ಈ ಹಕ್ಕಿ ಮರವನ್ನು ಕೊಕ್ಕಿನಿಂದ ಢಮರುಗದಂತೆ, ಢಮ, ಢಮ ಎಂದು ಬಡಿಯುತ್ತಿದ್ದರೆ, ನೋಡುವವರ ಮೈ ಮನಸ್ಸು ಒಂದು ಕ್ಷಣ ಜುಂ... ಎನ್ನಿಸುತ್ತದೆ. ಎಷ್ಟೊಂದು ವೇಗವಾಗಿ ಈ ಹಕ್ಕಿ ಹೊಡೆಯುತ್ತದೆಂದರೆ, ನಾವೇನಾದರು ಈ ವೇಗದಲ್ಲಿ ನಮ್ಮ ತಲೆಯನ್ನು ಮರಕ್ಕೆ ಬಡಿದುಕೊಂಡರೆ, ನಾಲ್ಕಾರು ಹೊಡೆತಕ್ಕೆ ತಲೆ ಅಪ್ಪಚ್ಚಿಯಾಗುತ್ತದಷ್ಟೇ. ನಮ್ಮ ಹಳ್ಳಿಯ ಮನೆಗಳ ಬಾಗಿಲು ಎತ್ತರವಿರುವುದಿಲ್ಲ. ನಗರದಿಂದ ಹಳ್ಳಿಗೆ ಅಪರೂಪಕ್ಕೆ ಬಂದವರು ತಲೆ ತಗ್ಗಿಸದೆ ನೇರವಾಗಿ ಮನೆ ಒಳಗೆ ಎಂಟ್ರಿ ಕೊಟ್ಟಾಗ ಹಣೆಗೆ ಡಮ್ ಎಂದು ಹೊಡೆಯುತ್ತಲ್ಲ.. ಅಂತಹ ಹೊಡೆತವಿದು!

ಆದರೆ ಈ ಹಕ್ಕಿಗೆ ಅದೊಂದು ಹೊಡೆತವೇ ಅಲ್ಲ. ಈ ಮರಕುಟುಕನ ಕೊಕ್ಕು, ತಲೆಯ ವಿನ್ಯಾಸ, ಮರಕ್ಕೆ ತಲೆಯನ್ನು ಚಚ್ಚಲು ಹೇಳಿಮಾಡಿಸಿದಂತಿದೆ. ಅದರ ರಚನೆ ಹಲವು ಉತ್ತಮ ಮಾರ್ಪಾಡುಗಳಿಗೆ ಒಳಗಾಗಿದೆ. ಉಕ್ಕಿನಂತೆ ನೇರವಾಗಿ ಚೂಪಾಗಿರುವ ಕೊಕ್ಕು, ಜೊತೆಗೆ ಕೊಕ್ಕು ಮತ್ತು ತಲೆ ಬುರುಡೆಯನ್ನು ಜೋಡಿಸಿರುವ ಮಾಂಸಖಂಡಗಳು, ಬಲವಾದ ಹೊಡೆತವನ್ನು ಮೆದುಳಿಗೆ ವರ್ಗಾಯಿಸದೆ ಶಾಕ್ ಅಬ್ಸಾರ್ಬರ್ ರೀತಿಯಲ್ಲಿ ಕಾರ್ಯ ನಿರ್ವಹಿಸುವ ವಿಧಾನ! ಹಾಗಾಗಿ ಅದು ಎಷ್ಟೇ ಬಲವಾಗಿ ಕೊಕ್ಕಿನಿಂದ ಮರಕ್ಕೆ ಹೊಡೆದರೂ ಅದರ ತಲೆಗೆ ಯಾವುದೇ ಹಾನಿ ಉಂಟಾಗದು.



ಇತ್ತೀಚೆಗೆ ಕ್ರಿಮಿನಾಶಕಗಳ ಅತೀವ ಬಳಕೆಯಿಂದ, ಕ್ರಿಮಿ ಕೀಟಗಳೊಂದಿಗೆ ಇರುವೆಗಳೂ ಸಾಯುತ್ತಿದ್ದು, ಇದು ಪರೋಕ್ಷವಾಗಿ ಕಂದು ಮರಕುಟುಕವನ್ನು ವಿನಾಶದ ಅಂಚಿಗೆ ಕೊಂಡೊಯ್ಯುತ್ತಿದೆ. ಈ ಕಂದು ಮರಕುಟುಕಕ್ಕೆ ಮರ ಇರುವೆಗಳೇ ಆಹಾರ ಮತ್ತು ಅವುಗಳ ಗೂಡು ಸಂತಾನವೃದ್ಧಿಯ ಕೇಂದ್ರ ಬಿಂದು. ಕ್ರಿಮಿನಾಶಕದಿಂದ ಕಪ್ಪಿರುವೆಗಳು ಗೂಡು ಕಟ್ಟದಿದ್ದರೆ ಈ ಕಂದು ಮರಕುಟುಕಗಳೂ ಪ್ರತಿಕೂಲ ಪರಿಸ್ಥಿತಿ ಎದುರಿಸುತ್ತವೆ. ಆಂಗ್ಲ ಭಾಷೆಯಲ್ಲಿ 'ರೂಫುಸ್ ವುಡ್ ಪೆಕರ್' ಎಂದು ಕರೆಯಿಸಿಕೊಳ್ಳುವ ಇದರ ವೈಜ್ಞಾನಿಕ ಹೆಸರು **Micropternus brachyurus.**

ಹಕ್ಕಿಗಳ ಜೀವನಕ್ರಮದ ಅಧ್ಯಯನವೇ ಒಂದು ರೋಚಕ ಅನುಭವ. ಸಾಮಾನ್ಯವಾಗಿ ನಾವು ಒಂದು ಪ್ರಭೇದದ ಹಕ್ಕಿಗಳ ಜೀವನಕ್ರಮ ಒಂದೇ ರೀತಿಯಿದೆ ಎಂದು ಭಾವಿಸುತ್ತೇವೆ. ಆದರೆ ಅವುಗಳ ಮಧ್ಯೆಯೂ ಜೀವನಶೈಲಿಯಲ್ಲಿ ವ್ಯತ್ಯಾಸಗಳಿವೆ.